ಹತ್ತಿ ಉರಿದು, ಸಿಡಿದು, ಸ್ಫೋಟಿಸಿ ಭೂಮಿಯಂತೆ ಬೇರೊಂದು ಗ್ರಹವೇ ಆಗಿ ತನ್ನ ಅಸ್ತಿತ್ವವನ್ನು ತಾನು ಸ್ಥಾಪಿಸಿಕೊಳ್ಳುವ ಛಲವಿದ್ದರೆ ಹಾಗೆ ಮಾಡುವುದರಲ್ಲಿಯೂ ಅರ್ಥವಿತ್ತು. ಆದರೆ ಮರ್ಯಾದೆ, ಗೌರವ ಎಂತೆಲ್ಲ ಟೊಳ್ಳು ಇರುವೆ ಗೂಡುಗಳ ನಿರ್ಮಿಸಿಕೊಂಡು ಬದುಕ ಹೊರಟವಳಿಗೆ ಬೇರೆ ದಾರಿಯಾದರೂ ಎಲ್ಲಿತ್ತು? “ಹೊಂದಿಕೊಂಡು ಹೋಗು ಮಗಳೇ, ಹೆಂಗಸರಿಗೆ ಸುಖಬೇಕು ಅಂತ ಕೇಳೋ ಹಕ್ಕಿಲ್ಲ” ಎನ್ನುತ್ತ ತನ್ನ ಈ ಬರಡು ಜೀವನವನ್ನೇ ಸಮರ್ಥಿಸಿ, ತಂಗಿಯರಿದ್ದಾರೆ ಎನ್ನುವುದನ್ನು ಸೂಚ್ಯವಾಗಿ ನುಡಿದು ತಮ್ಮ ಸಂಸಾರವನ್ನು, ಜವಾಬ್ದಾರಿಯನ್ನು ಮಾತ್ರವೇ ಪರಿಗಣಿಸಿದ ಅಪ್ಪಅಮ್ಮನೇ ತನ್ನ ಗಂಡನಿಂದ ಬಸ್ ಚಾರ್ಜು ಪಡೆದು ಹೋದ ಮೇಲೆ ಬೇರೆಯವರಿಂದ ಏನನ್ನು ತಾನೇ ನಿರೀಕ್ಷಿಸಲು ಸಾಧ್ಯವಿತ್ತು? “ಏನೋ ಒಂದು ತಿನ್ನೋದಕ್ಕಾದರೂ ಎರಡು ಹೊತ್ತು ಅನ್ನ ಸಿಕ್ಕಿದೆಯಲ್ಲ, ಮನೆ, ಕಾರು, ಬಂಗಲೆ ಏನೆಲ್ಲ ಇದೆಯಲ್ಲೇ ನಿನ್ನಲ್ಲಿ... ಇದು ಒಂದು ಐಬು ತಾನೇ... ಹೊಂದಿಕೊಂಡು ಬಿಡು” ಎನ್ನುತ್ತ ತನ್ನ ರೇಷ್ಮೆ ಸೀರೆಯನ್ನೇ ಮುಟ್ಟಿ ನೋಡುವ ಅಮಾಯಕ ಗೆಳತಿಯರಿಂದ ಯಾವ ಸಹಾಯವನ್ನು ತಾನೇ ನಿರೀಕ್ಷಿಸಬಹುದಿತ್ತು? ಅಂತೆಯೇ ಸುಮ್ಮನಾಗಿದ್ದು. ಆಡಲಾಗದ ಕಾರಣ, ಆಡಿ ಉಳಿಯಲಾಗದ ಕಾರಣ, “ನನ್ಮಗ ಮುಟ್ಟಿದರೆ ಸಾಕು ಮಕ್ಕಳಾಗುತ್ತವೆ” ಎನ್ನುವ ಅತ್ತೆಯ ನಂಬಿಕೆಯನ್ನು ಬುಡಮೇಲು ಮಾಡಲಾಗದ ಕಾರಣ. ಎಲ್ಲ ಮೆಟ್ಟಿ ನಿಂತು ಗೌತಮನ ಮುಖವಾಡ ಕಳಚಿದ ಮೇಲೆ ಮುಂದೇನು? ಎನ್ನವ ಪ್ರಶ್ನೆಗೆ ಉತ್ತರ ಸಿಗದ ಕಾರಣ, ಕಾರಣಗಳಷ್ಟೇ ಉಳಿದು ಹೋಗಿ ಬದುಕು ಕರಕಲಾಗಿದ್ದು, ಆಸೆಗಳು ವಿಷ ಕುಡಿದಿದ್ದು; ಕನಸುಗಳು ಮನೆ ಖಾಲಿ ಮಾಡಿದ್ದು. ಆದರೆ ಅಪವಾದಗಳು ಏನೂ ತಪ್ಪಿಲ್ಲದ ತನ್ನನ್ನೇ ಹುಡುಕಿ ಬರುವಾಗ ಮಾತ್ರ

